ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Friday, the 3rd July, 1981/Ashada 12, 1903. S.E.

The House met in the Assembly Chamber, Vidhana Soudha, a Twelve of the Clock.

[MR. DEPUTY SPEAKER (SRI BAPU RAO HULSOORKAR) in the Chair.]

STARRED QUESTIONS
(to which oral answers were given)

Grant of Forest Land in Makali Forest

35 SRI D.T. RAMU (Channapatna) Will the Minister for Forests, Mines & Geology be pleased to state :

(a) whether Government is aware that the Government had issued an order about 20 years back sanctioning land to 300 poor people in the Makali Forest

(b) the reasons for issuing a stay order by the Government at the time of allotting this land to the said poor people ;

(c) whether there is a proposal before the Government to allot the land to the said poor people by withdrawing the said stay order at least now ?

SRI G. MADEGOWDA (Minister for Forest, Mines & Geology)—

(a) An order was issued during 1960 for giving an extent of 760 acres of land to about 268 persons for agricultural purposes in the Makali Manna Jungle area belonging to Channapatna Forest range.

(b) Consequent on receipt of complaints against sanction of this land for agricultural purpose, stay order was issued by the then Hon'ble Minister for Forest for spot inspection.

(c) No.

ಶ್ರೀ ಡಿ.ಟಿ ರಾಮು.—ಸ್ವಾಮಿ. ಈ ಪ್ರಶ್ನೆಯ (ಆ)ಗೆ ಉತ್ತರವಾಗಿ ಈ ಜಮೀನನ್ನು ವ್ಯವಸಾಯಕ್ಕೆ ಕೊಡುವುದರ ವಿರುದ್ಧ ದೂರುಗಳು ಬಂದಿದ್ದರಿಂದ ಆಗಿನ ಮಾನ್ಯ ಅರಣ್ಯ ಮಂತ್ರಿಗಳು ಸ್ಥಳ ಪರಿಶೀಲನೆಗಾಗಿ ತಡೆಯಾಜ್ಞೆಯನ್ನು ಕೊಡಲಾಯಿತು ಎಂದು ಹೇಳಿದ್ದೀರಿ. ಇದರ ನಿಜವಾದ ಕಾರಣ ಏನು ಅದನ್ನು ದಯವಾಡಿ ಹೇಳುತ್ತೀರಾ ಸ್ವಾಮಿ ?

ಶ್ರೀ ಕಾಗೋಡು ತಿಮ್ಮಪ್ಪ (ಅರಣ್ಯ ಮತ್ತು ಖನಿಜ ಸಂಪತ್ತು ಮಂತ್ರಿಗಳ ಪರವಾಗಿ).— ನಿಜವಾದ ಕಾರಣ ಉತ್ತರದಲ್ಲಿ ಏನು ಕೊಟ್ಟಿದೆಯೋ ಅದೇ ನಿಜವಾದ ಕಾರಣ.

ಶ್ರೀ ಡಿ.ಟಿ ರಾಮು.—ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇದ್ದು ಅವರಿಂದ ಉತ್ತರ ಸಿಕ್ಕಿದ್ದರೆ ಚೆನ್ನಾಗಿತ್ತು. ಇದಕ್ಕೆ ನಿಜವಾದ ಕಾರಣ ಏನು ಎಂದು ಹೇಳುವುದಾದರೆ ಸುಮಾರು ೨೬೮ ಬಡ ರೈತರಿಗೆ ಈ ಭೂಮಿಯನ್ನು ಮಂಜೂರು ಮಾಡಿದಾಗ ಈ ಅರಣ್ಯದ ಭೂಮಿಯಲ್ಲಿ ಲಕ್ಷಾಂತರ ರೂಪಾಯಿ ಬೆಲೆ ಬಾಳತಕ್ಕಂಥಾ ಬೀಟೆ ಮರಗಳು, ಶ್ರೀಗಂಧದ ಮರಗಳು ಹಾಗೂ ಹೊನ್ನೆ ಮರಗಳು ಇದ್ದ ಕಾರಣ ಇದನ್ನು ಆ ರೈತರಿಗೆ ಕೊಡಬೇಡಿ ಎಂದು ಮಾಡಿದ್ದಾರೆ. ಈ ಬಗ್ಗೆ ರಾಜಕೀಯ ಹಿನ್ನಲೆಯ ಒಂದು ಉದ್ದೇಶದಿಂದ ಈ ಒಂದು ಕಾರಣವನ್ನು ಕೊಟ್ಟು ತಡೆ ಆಜ್ಞೆಯನ್ನು ಅವರು ಮಾಡಿದ್ದಾರೆ ಅಂದರೆ ಅಂದಿನ ಸರ್ಕಾರ ಈ ಕೆಲಸ ಮಾಡಿತು. ಇದು ಆಗಿರತಕ್ಕಂಥಾದ್ದು ೧೯೬೦ನೇ ಇಸವಿಯಲ್ಲಿ. ಈಗ ನಾವು ೧೯೮೦ನೇ ಇಸವಿಯಲ್ಲಿದ್ದೇವೆ. ಈಗಾಗಲೇ ೨೧ ವರ್ಷಗಳು ಉರುಳಿಹೋಗಿವೆ. ಆದರೂ ಕೂಡ ಆ ತಡೆಯಾಜ್ಞೆಯನ್ನು ತೆಗೆದಿಲ್ಲಾ. ೧೯೬೦ರಲ್ಲಿ ಮಂಜೂರು ಮಾಡಿದಂಥಾ ಈ ಅರಣ್ಯ ಭೂಮಿಗೆ ಇರತಕ್ಕಂಥಾ ತಡೆಯಾಜ್ಞೆಯನ್ನು ತೆಗೆದು ಆ ಬಡ ರೈತರಿಗೆ ಮಂಜೂರು ಮಾಡುವುದಕ್ಕೆ ಸಹಾಯ ಮಾಡುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ಹಿಂದಿನ ಅರಣ್ಯ ಸಚಿವರು ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಅಲ್ಲಿ ಸ್ಥಳ ಪರಿಶೀಲನೆಯನ್ನು ಮಾಡಿದ್ದಾರೆ. ಇದಾದಮೇಲೆ ಅದಕ್ಕೆ ತಡೆಆಜ್ಞೆಯನ್ನು ಕೊಟ್ಟಿದ್ದಾರೆ. ಈವರೆಗೆ ನಾವು ಅದನ್ನು ತೆಗೆದಿಲ್ಲ. ಅದು ಹಾಗೆಯೇ ಇದೆ. ಬಡವರಿಗೆ ಸಹಾಯ ಮಾಡುವುದರಲ್ಲಿ ನಮ್ಮ ಆತಂಕ ಇಲ್ಲ ಅಥವಾ ತಕರಾರು ಇಲ್ಲ. ಈ ಮಧ್ಯದಲ್ಲಿ ಕೇಂದ್ರ ಸರ್ಕಾರದ ಒಂದು ಕಾನೂನು ಬಂದಿದೆ. ಕೇಂದ್ರ ಸರ್ಕಾರದ ಕಾನೂನು ಜಾರಿಗೆ ಬಂದ ಕಾರಣಕ್ಕಾಗಿ ಇಪತ್ತು ಯಾವ ಜಮೀನನ್ನೂ ಸರ್ಕಾರ ಬಿಡುಗಡೆ ಮಾಡುವ ಸ್ಥಿತಿಯಲ್ಲಿ ಇಲ್ಲ. ಈ ಒಂದು ತೊಂದರೆಯನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಶಿವಲಿಂಗೇಗೌಡ.—ಸ್ವಾಮಿ, ಕೇಂದ್ರ ಸರ್ಕಾರದವರ ಆಜ್ಞೆ ಈಗ ಬಂದಿದೆ. ೧೯೬೦ರಿಂದಲೇ ಅಲ್ಲಿ ಆ ಜನರು ಪೊಸೆಷನ್‌ನಲ್ಲಿ ಇದ್ದಾರೆ. ಈಗ ಅಲ್ಲಿ ಅವರು ಸಾಗುವಳಿ ಮಾಡುತ್ತಾ ಇರುತ್ತಾರೆ. ಅಂತಹ ಜಮೀನುಗಳನ್ನು ನೀವು ಅವರಿಗೆ ಕೊಡಬಹುದಲ್ಲ ?

ಶ್ರೀ ಕಾಗೋಡು ತಿಮ್ಮಪ್ಪ.—ಈ ಜಮೀನಿನ ಬಗ್ಗೆ ವಿವರವನ್ನು ಹೇಳಬೇಕಾದರೆ, ಈ ಜಮೀನು ಈಗ ಯಾವ ರೈತರ ಸ್ವಾಧೀನದಲ್ಲೂ ಇಲ್ಲ. ಈಗ ಈ ಜಮೀನಿನಲ್ಲಿ ಅರಣ್ಯವನ್ನು ಬೆಳೆಸಿದ್ದಾರೆ. ಬೆಂಗಳೂರು ಜಿಲ್ಲೆಯಲ್ಲಿ ಅರಣ್ಯದ ಕೊರತೆ ಇದೆಯೆಂದು ತಿಳಿದು ಬಂದಿದೆ. ಅಂಥಾದ್ದರಲ್ಲಿ ಅಲ್ಲಿ ಅರಣ್ಯವನ್ನು ಬೆಳೆಸಿರತಕ್ಕಂಥ ಪ್ರದೇಶದಲ್ಲಿ ಅವರಿಗೆ ಜಮೀನು ಕೊಡುವುದಕ್ಕೆ ಬರುವುದಿಲ್ಲ. ಆ ಅರಣ್ಯ ಪ್ರದೇಶ ಎಲ್ಲರಿಗೂ ಸೀಮಿತವಲ್ಲ. ಆದರೂ ಎಲ್ಲಿ ರೈತರು ಅರಣ್ಯ ಭೂಮಿಯಲ್ಲಿ ಸಾಗುವಳಿಯನ್ನು ಮಾಡುತ್ತಿದ್ದಾರೆಯೋ ಅಲ್ಲಿ ಜಮೀನು ಸಾಗುವಳಿ ಮಾಡುವುದಕ್ಕೆ ಯೋಗ್ಯವಾಗಿದ್ದ ಪಕ್ಷದಲ್ಲಿ ಅದನ್ನು ಬಿಡುಗಡೆ ಮಾಡುವ ವಿಚಾರದಲ್ಲಿ ಕೇಂದ್ರ ಸರ್ಕಾರದವರ ಮಂಜೂರಾತಿಯನ್ನು ಪಡೆದು ಒಂದು ತೀರ್ಮಾನ ಮಾಡಬೇಕು ಎನ್ನತಕ್ಕಂಥ ಅಭಿಲಾಷೆ ಸರ್ಕಾರಕ್ಕೆ ಇದೆ. ಆ ಜಮೀನು ಯಾರ ಸ್ವಾಧೀನದಲ್ಲೂ ಇಲ್ಲ, ಅಲ್ಲಿ ಯಾರೂ ಸಾಗುವಳಿ ಮಾಡುತ್ತಾ ಇಲ್ಲ.

ಶ್ರೀ ಪಿ.ಎನ್. ರೆಡ್ಡಿ —ಈ ವಿಚಾರದಲ್ಲಿ ತಡೆಯಾಜ್ಞೆ ಇದೆಯೆಂದು ತಾವು ಉತ್ತರ ಕೊಟ್ಟಿದ್ದೀರಿ. ಈ ಬಗ್ಗೆ ಕೇಂದ್ರ ಸರ್ಕಾರದವರ ಕಾನೂನು ಇದೆ ಎಂಬುದು ಉತ್ತರದಲ್ಲಿ ಬಂದಿಲ್ಲ. ಈಗಲಾದರೂ ತಡೆಯಾಜ್ಞೆಯನ್ನು ತೆಗೆದು ಆ ಬಡವರಿಗೆ ಆ ಭೂಮಿಯನ್ನು ಹಂಚುವ ಯೋಚನೆ ಇದೆಯೇ ಎಂದು ಕೇಳಿರುವುದಕ್ಕೆ ಉತ್ತರದಲ್ಲಿ 'ಇಲ್ಲ' ಎಂದು ಹೇಳಿದ್ದೀರಿ. ಬಡವರ ಹಿತದೃಷ್ಟಿಯಿಂದ ಈ ತಡೆಯಾಜ್ಞೆಯನ್ನು ವಾಪಸ್ಸು ತೆಗೆದುಕೊಳ್ಳಿ. ಈ ಬಗ್ಗೆ ಕೇಂದ್ರ ಸರ್ಕಾರದವರ ಆಜ್ಞೆ ಹೇಗೆ ಇದೆ ಎಂಬುದರ ಬಗ್ಗೆ ಉತ್ತರ ಕೊಡಿ.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ಈ ವಿಚಾರದಲ್ಲಿ ಇರತಕ್ಕಂಥ ತಡೆಯಾಜ್ಞೆಯನ್ನು ಒಂದು ವೇಳೆ ತೆಗೆದ ನಂತರವೂ ಕೂಡ ಆ ಭೂಮಿಯನ್ನು ಅವರಿಗೆ ಕೊಡುವುದಕ್ಕೆ ಬರುವುದಿಲ್ಲ. ಹಿಂದೆ ಏನಾದರೂ ಡೀಫಾರೆಸ್ಟರಿ ನೋಟಿಫಿಕೇಷನ್ ಇಷ್ಯೂ ಮಾಡಿದ್ದರೆ ಈಗಲೂ ಕೊಡುವುದಕ್ಕೆ ಬರುತ್ತಿತ್ತು.

ಕೇಂದ್ರ ಸರ್ಕಾರದವರನ್ನು ನಾವು ಕೇಳಿದ್ದೇವೆ. ಈ ಬಗ್ಗೆ ಅವರು ಡೀಫಾರೆಸ್ಟರಿ ನೋಟಿಫಿಕೇಷನ್ ಅನ್ನು ಇಷ್ಯೂ ಮಾಡಿಲ್ಲ. ಈ ವಿಚಾರದಲ್ಲಿ ಈಗಲೂ ಕೂಡ ತಡೆಯಾಜ್ಞೆ ಇದೆ. ಅದನ್ನು ತೆಗೆದರೂ ಕೂಡ ಭೂ ಮಂಜೂರಾತಿ ಕೊಡುವುದಕ್ಕೆ ಬರುವುದಿಲ್ಲ.

ಶ್ರೀ ಪಿ.ಎನ್. ರೆಡ್ಡಿ.—ಸ್ವಾಮಿ, ೨೦ ವರ್ಷದಿಂದ ಕೂಡ ಆ ಒಂದು ತಡೆಯಾಜ್ಞೆ ಇದೆ. ಅದನ್ನು ವಾಪಸ್ ತೆಗೆದುಕೊಳ್ಳಿ. ಅದನ್ನು ವಾಪಸ್ಸು ತೆಗೆದುಕೊಂಡು ಆ ಭೂಮಿಯನ್ನು ರೈತರಿಗೆ ಕೊಡಿ. ಆಮೇಲೆ ಎಲ್ಲವೂ ಕಾನೂನು ಪ್ರಕಾರ ಸರಿಯಾಗಿ ಆಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈಗಾಗಲೇ ಹಿಂದಿನ ಅರಣ್ಯ ಸಚಿವರು ಈ ಬಗ್ಗೆ ಕಾನೂನು ಪ್ರಕಾರವಾಗಿ ಸ್ಥಳ ಪರಿಶೀಲನೆ ಮಾಡಿದ್ದಾರೆ ಮತ್ತು ತಡೆಯಾಜ್ಞೆಯನ್ನು ಕೊಟ್ಟಿದ್ದಾರೆ. ಇರತಕ್ಕಂಥ ತಡೆಯಾಜ್ಞೆಯನ್ನು ತೆಗೆಯುವುದರಿಂದ ಅದನ್ನು ರೈತರಿಗೆ ಕೊಡುವುದಕ್ಕೆ ಬರುವುದಿದ್ದರೆ ಅದನ್ನು ವಾಪಸ್ಸು ತೆಗೆದುಕೊಳ್ಳತಕ್ಕಂಥ ಕಾರ್ಯವನ್ನು ಮಾಡಬಹುದಾಗಿತ್ತು. ಆ ತಡೆಯಾಜ್ಞೆಯನ್ನು ತೆಗೆದರೂ ಕೂಡ ಆ ಭೂಮಿಯನ್ನು ರೈತರಿಗೆ ಕೊಡುವುದಕ್ಕೆ ಬರುವುದಿಲ್ಲ. ಏಕೆಂದರೆ ಕೇಂದ್ರ ಸರ್ಕಾರದವರ ಕಾನೂನಿನ ಅಡಚಣೆ ಇರುವುದರಿಂದ.

ಶ್ರೀ ಟಿ.ಬಿ. ಜಯಚಂದ್ರ.—ಸ್ವಾಮಿ, ಈ ವಿಚಾರದಲ್ಲಿ ೨೦ ವರ್ಷದ ಹಿಂದೆ ಸ್ಟೇ ಆರ್ಡರ್ ಕೊಟ್ಟಿರತಕ್ಕಂಥಾದ್ದು ಇದೆ. ಈಗಾಗಲೇ ೨೦ ವರ್ಷ ಆದಮೇಲೂ ಕೂಡ ಸ್ಟೇ ಆರ್ಡರ್ ಕೊಡುವುದಕ್ಕೆ ಬರುವುದಿಲ್ಲ. ಮೊದಲಿನಿಂದಲೂ ಕೂಡ ಆ ಜಮೀನಿನಲ್ಲಿ ಬಡ್ಡರೈತರು ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಅಂತಹ ಜಮೀನಿನಲ್ಲಿ ಪ್ಲಾನ್‌ಟೇಷನ್ ಹಾಕಬೇಕು ಎಂದು ಹೇಳಿ ಸ್ಟೇ ಆರ್ಡರ್ ಕೊಟ್ಟು ರೈತರಿಗೆ ಅಲ್ಲಿಗೆ ಹೋಗಬೇಡಿ ಎಂದು ಹೇಳುವುದಕ್ಕೆ ಬರುವುದಿಲ್ಲ. ಈಗ ಸ್ಟೇ ಆರ್ಡರ್ ಕೊಟ್ಟಿರತಕ್ಕಂಥಾದ್ದು ಕೂಡ ಇಲ್ಲೀಗಲ್ ಆಗಿದೆ. ಈಗ ಇರತಕ್ಕಂಥ ಸ್ಟೇ ಆರ್ಡರನ್ನು ತೆಗೆದು ಆ ಜನರಿಗೆ ಸಾಗುವಳಿ ಮಾಡುವುದಕ್ಕೆ ಅವಕಾಶ ಕೊಡಿ, ಅವರು ಇನ್ನು ಮುಂದೆಯೂ ಸಾಗುವಳಿ ಮಾಡುತ್ತಾರೆ. ಅಲ್ಲಿ ಪ್ಲಾನ್‌ಟೇಷನ್ ಮಾಡಬೇಕು ಎನ್ನತಕ್ಕಂಥ ಉದ್ದೇಶ ಏನಿದೆ ಅದನ್ನು ಬೇರೆ ಕಡೆ ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರಿಗೆ ನಾನು ಹೇಳಿದಂತಹ ಮಾಹಿತಿಯೇ ಅರ್ಥವಾಗಿಲ್ಲ. ಅದು ಮೊದಲಿನಿಂದಲೂ ಅರಣ್ಯ ಭೂಮಿಯಾಗಿದೆ. ಅರಣ್ಯ ಇಲಾಖೆಗೆ ಸೇರಿದಂಥ ಭೂಮಿ. ಅದು ಕಂದಾಯ ಇಲಾಖೆಗೆ ಸೇರಿದಂಥ ಭೂಮಿ ಅಲ್ಲ. ಆ ಅರಣ್ಯ ಭೂಮಿಯನ್ನು ಸಾಗುವಳಿ ಮಾಡುವುದಕ್ಕೆ ಬಿಡುಗಡೆ ಮಾಡಿ ರೈತರಿಗೆ ಮಂಜೂರು ಮಾಡಬೇಕು ಎನ್ನತಕ್ಕಂಥ ಆಜ್ಞೆ ಇತ್ತು. ಆದರೆ ಅಲ್ಲಿಯ ಸ್ಥಳೀಯ ಜನರೇ ಕೊಟ್ಟಂತಹ ತಕರಾರು ಅರ್ಜಿಯ ಆಧಾರದ ಮೇಲೆ ಹಿಂದಿನ ಅರಣ್ಯ ಸಚಿವರು ಸ್ಥಳ ಪರಿಶೀಲನೆಯನ್ನು ಮಾಡಿ ತಡೆಯಾಜ್ಞೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಈಗ ಅದನ್ನು ಸಾಗುವಳಿ ಜಮೀನು ಎಂದು ಪರಿವರ್ತನೆ ಮಾಡುವ ಕಾರ್ಯ ಆಗತ್ಯವಿಲ್ಲ. ಈಗಾಗಲೇ ನಾನು ಹೇಳಿದಂತೆ ಡೀಫಾರೆಸ್ಟರಿ ನೋಟಿಫಿಕೇಷನ್ ಇಷ್ಯೂ ಮಾಡಿದರೆ ಮಾತ್ರ ಅದನ್ನು ಕೊಡುವುದಕ್ಕೆ ಬರುತ್ತದೆ ಎಂಬುದಾಗಿ ಕೇಂದ್ರ ಸರ್ಕಾರದವರ ಆಜ್ಞೆ ಇದೆ. ಈ ಬಗ್ಗೆ ಹಿಂದೆ ಕೂಡ ಡೀಫಾರೆಸ್ಟರಿ ನೋಟಿಫಿಕೇಷನ್ ಇಷ್ಯೂ ಆಗಲಿಲ್ಲ. ಅದು ಇವತ್ತಿಗೂ ಕೂಡ ಅರಣ್ಯ ಭೂಮಿಯಾಗಿಯೇ ಉಳಿದಿದೆ. ಅಲ್ಲಿ ಯಾರೂ ಸಾಗುವಳಿ ಮಾಡುತ್ತಾ ಇಲ್ಲ ಮತ್ತು ಅದು ಯಾರ ಸ್ವಾಧೀನದಲ್ಲೂ ಇಲ್ಲ. ಆದ್ದರಿಂದ ಅದನ್ನು ಪರಿವರ್ತನೆ ಮಾಡುವ ಅಗತ್ಯವೂ ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ.—ಈ ವಿಚಾರದಲ್ಲಿ ತಾವು ಕೇಂದ್ರಸರ್ಕಾರಕ್ಕೆ ಒಂದು ರೆಕ್‌ಮೆಂಡೇಷನ್ ಕಳಿಸಬೇಕು. ಆದಷ್ಟು ಬೇಗ ಅದನ್ನು ಕಳಿಸಿ, ಈ ಬಗ್ಗೆ ಸರ್ಕಾರದ ಕಮಿಟಿ ಆಗಿದೆ, ಆ ಜಮೀನನ್ನು ಆ ಬಡರೈತರಿಗೆ ಕೊಡಿಸಿದ್ದರೆ ಬಹಳ ತೊಂದರೆಯಾಗುತ್ತದೆ, ಈ ರೀತಿ ತೊಂದರೆ ಮಾಡುವುದು ಬೇಡ ಎಂದು ಹೇಳಿ ಕೇಂದ್ರ ಸರ್ಕಾರಕ್ಕೆ ತಾವು ಒಂದು ರೆಕ್‌ಮೆಂಡೇಷನ್ ಮಾಡಿ. ಅದು ಅಲ್ಲಿಂದ ಬಂದಮೇಲೆ ಅವರಿಗೆ ಆ ಜಮೀನನ್ನು ಬಿಡುಗಡೆ ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ಈಗಾಗಲೇ ಬೆಂಗಳೂರು ಜಿಲ್ಲೆಯಲ್ಲಿ ಅರಣ್ಯದ ಕೊರತೆ ಇದೆ. ಇಲ್ಲಿ ಎಷ್ಟು ಪ್ರಮಾಣದಲ್ಲಿ ಅರಣ್ಯ ಇರಬೇಕಾಗಿತ್ತೋ ಅಷ್ಟು ಪ್ರಮಾಣದಲ್ಲಿ ಅರಣ್ಯ ಇಲ್ಲ. ೨೦ ವರ್ಷದಿಂದ ಇಲ್ಲಿಯವರೆಗೂ ಆ ಪ್ರದೇಶದಲ್ಲಿ ಯಾವ ಜಮೀನುಗಳನ್ನು ಸಾಗುವಳಿಗೆ ಬಿಡುಗಡೆ ಮಾಡಬೇಕು ಎಂದು ಸರ್ಕಾರಿ ಆಜ್ಞೆ ಆಗಿತ್ತೋ ಆ ೨೦೦ ಎಕರೆ ಪ್ರದೇಶದಲ್ಲಿ ಮೊದಲಿನಿಂದಲೂ ಅರಣ್ಯವನ್ನು ಬೆಳೆಸಿ

ದ್ದಾರೆ. ಮಾನ್ಯ ಸದಸ್ಯರ ಕ್ಷೇತ್ರವಾದ ಚನ್ನಪಟ್ಟಣದಲ್ಲಿ ಹಾಲೆ ಮರದ ಕೈಗಾರಿಕೆಗಳು ನಡೆಯುತ್ತಿವೆ. ಅಲ್ಲೆಲ್ಲಾ ಈಗ ಹಾಲೆ ಮರದ ಕೊರತೆ ಇದೆ. ಈ ಸಣ್ಣ ಕೈಗಾರಿಕೆಗಳನ್ನು ಉಳಿಸುವೆಕೆನ್ನುವ ದೃಷ್ಟಿಯಿಂದ ಹೇಳುವುದಾದರೆ ಹಾಲೆ ಮರದ ಕಚ್ಚಾ ಸಾಮಗ್ರಿಗಳನ್ನು ಅವರಿಗೆ ಅಗತ್ಯವಾಗಿ ಒದಗಿಸಿಕೊಡಬೇಕಾಗಿದೆ. ಆ ಅರಣ್ಯ ಭೂಮಿಯಲ್ಲಿ ಹಾಲೆ ಮರಗಳನ್ನು ಬೆಳೆಸತಕ್ಕಂಥ ಉದ್ದೇಶ ಅರಣ್ಯ ಇಲಾಖೆಗೆ ಇದೆ. ಅಲ್ಲಿ ಹಾಲೆ ಮರಗಳನ್ನು ಬೆಳೆಸಿದರೆ ಈ ಸಣ್ಣ ಕೈಗಾರಿಕೆಗಳಿಗೆ ಹಾಲೆ ಮರಗಳನ್ನು ಕೊಡುವುದಕ್ಕಾಗುತ್ತದೆ. ಅವರು ಹಾಲೆ ಮರದ ಕಚ್ಚಾ ಮಾಲು ಇಲ್ಲದೇ ಅವರೆಲ್ಲಾ ತೊಂದರೆಗೆ ಒಳಗಾಗಿದ್ದಾರೆ. ಬೇರೆ ಬೇರೆ ಪ್ರದೇಶಗಳಿಗಿಂತ ಆ ಪ್ರದೇಶ ಇವತ್ತು ಹಾಲೆ ಮರಗಳಿಗೆ ಹೆಸರಾದಂಥ ಪ್ರದೇಶ ಮತ್ತು ಹಾಲೆ ಮರದ ಸಣ್ಣ ಕೈಗಾರಿಕೆಗಳಿಗೆ ಹೆಸರಾದಂಥ ಪ್ರದೇಶ ಆದು. ಈ ಹಾಲೆ ಮರದ ಕೊರತೆಯಿಂದಾಗಿ ಆ ಉದ್ಯಮಕ್ಕೇ ಬಲವಾದ ಏಟು ಬಿದ್ದಿದೆ. ಅದನ್ನು ನಾವೆಲ್ಲಾ ಗಮನದಲ್ಲಿಟ್ಟುಕೊಂಡು ಮಾತನಾಡಬೇಕು. ನಮಗೆ ಕೂಡ ಬಡವರ ಕಷ್ಟವನ್ನು ಮಾನವೀಯತೆ ದೃಷ್ಟಿಯಿಂದ ನೋಡತಕ್ಕಂಥ ತೆರೆದ ಕಣ್ಣು ಇದೆ ನೀವು ಹೇಳಿರತಕ್ಕಂಥ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಈ ಬಗ್ಗೆ ಸರ್ಕಾರ ಸೂಕ್ತವಾಗಿ ಪರಿಶೀಲಿಸುತ್ತದೆ.

ಶ್ರೀ ಡಿ.ಟಿ. ರಾಮು.—ಸ್ವಾಮಿ, ಮಾನ್ಯ ಮಂತ್ರಿಯವರಾದ ಶ್ರೀ ಕಾಗೋಡು ತಿಮ್ಮಪ್ಪನವರು ಕಾಗೋಡಿನಲ್ಲಿ ಈ ವಿಚಾರದಲ್ಲಿ ಕ್ರಾಂತಿಕಾರಕವಾದ ಇತಿಹಾಸವನ್ನೇ ನಿರ್ಮಿಸಿದ್ದಾರೆ. ಅವರಿಂದ ಇಂತಹ ಉತ್ತರ ಬರುತ್ತಿರುವುದನ್ನು ಕೇಳಿ ನನಗೆ ನಿಜಕ್ಕೂ ಆಶ್ಚರ್ಯವಾಗುತ್ತಿದೆ. ಸ್ವಾಮಿ, ಅಲ್ಲಿ ಹಾಲೆ ಮರಗಳು ಇಲ್ಲ, ಅಲ್ಲಿ ಜಾಯಿಕಾಯಿಯ ಮರಗಳು ಇವೆ. ನಾನು ಅಲ್ಲಿ ಹೋಗಿ ನೋಡಿದ್ದೇನೆ. ತಾವು ಕಾಡು ಮಂತ್ರಿಗಳಾಗಿದ್ದಾಗ ನಾನು ತಮ್ಮ ಅಧಿಕಾರಿಗಳ ಜೊತೆಯಲ್ಲಿ ಹೋಗಿ ಆ ಕಾಡನ್ನು ಪರಿಶೀಲನೆ ಮಾಡಿದಾಗ ಅಲ್ಲಿ ಏನೇನೂ ಇಲ್ಲ, ಅಲ್ಲಿ ಕಾಡು ಬೆಳೆಸುವುದಕ್ಕೆ ಆ ಭೂಮಿ ಉಪಯೋಗವಾಗಿಲ್ಲ. ಆದಕಾರಣ ಈ ಬಗ್ಗೆ ತಾವು ಆ ಬಡರೈತರಿಗೆ ಆ ಜಮೀನನ್ನು ಮಂಜೂರು ಮಾಡಿಕೊಡತಕ್ಕಂಥ ಒಂದು ಮಾನವೀಯತೆಯ ತೀರ್ಮಾನವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ –ಸ್ವಾಮಿ, ಮಾನವೀಯತೆಯ ದೃಷ್ಟಿಯಿಂದ ನಾವು ಈಗಲೂ ಆ ಬಗ್ಗೆ ಪರಿಶೀಲನೆ ಮಾಡುತ್ತೇವೆ. ಈ ವಿಚಾರವನ್ನು ನಾವು ನಮ್ಮ ಸಹೋದ್ಯೋಗಿ ಅರಣ್ಯ ಸಚಿವರಿಗೆ ಹೇಳುತ್ತೇವೆ. ಅವರು ಇನ್ನೊಂದು ಸಾರಿ ಅಲ್ಲಿಗೆ ಹೋಗಿ ಸ್ಥಳ ಪರಿಶೀಲನೆ ಮಾಡಲಿ. ಆ ಬಡರೈತರಿಗೆ ಸಹಾಯ ಮಾಡತಕ್ಕಂಥ ಅವಕಾಶ ಸಿಕ್ಕಿದರೆ ನಾವು ಖಂಡಿತವಾಗಿಯೂ ಅವರಿಗೆ ಸಹಾಯ ಮಾಡುವುದಕ್ಕೆ ಆಲೋಚನೆ ಮಾಡುತ್ತೇವೆ, ಇದರಲ್ಲಿ ನಾವು ಹಿಂದೆ ಹೋಗುವುದಿಲ್ಲ

Electricity Board Sub-Divisions in Bidar District

81. SRI BHEEMANNA KHANDRE (Bhalki).—Will the Minister of State for Power be pleased to state:

(a) number of Karnataka Electricity Board Sub-Divisions established in Bidar District ;

(b) out of this, the number of Sub-Divisions, which have been provided with Lorry, Jeep and Store Rooms (Sub Division) wise details may kindly be furnished;

(c) if not the specific reasons for not providing may be furnished ;

(d) when these Sub-Divisions would be provided with Lorries, Jeeps and Store Rooms?

SRI G.H. ASWATHA REDDY (Minister of State for Power).—

(a) Seven Sub-Divisions.